# ಶ್ರಾದ್ಧದಲ್ಲಿನ ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ

## ಮನೋಗತ

ಹಿಂದೂಧರ್ಮದಲ್ಲಿ ಹೇಳಿರುವ ಈಶ್ವರಪ್ರಾಪ್ತಿಯ ಮೂಲಭೂತ ಸಿದ್ಧಾಂತಗಳಲ್ಲಿ 'ದೇವಋಣ, ಋಷಿಋಣ, ಪಿತೃಋಣ ಮತ್ತು ಸಮಾಜಋಣವನ್ನು ತೀರಿಸುವುದು' ಒಂದು ಮುಖ್ಯ ಉದ್ದೇಶವಾಗಿದೆ. ಇವುಗಳಲ್ಲಿ ಪಿತೃಋಣವನ್ನು ತೀರಿಸಲು 'ಶ್ರಾದ್ಧಕರ್ಮ'ವು ಆವಶ್ಯಕವಾಗಿದೆ. ತಂದೆತಾಯಿ ಮತ್ತು ಸಂಬಂಧಿಕರ ಮರಣೋತ್ತರ ಪ್ರಯಾಣವು ಸುಖಕರ ಮತ್ತು ಕ್ಲೇಶರಹಿತವಾಗಿ, ಅವರಿಗೆ ಸದ್ಗತಿಯು ಸಿಗಬೇಕೆಂದು ಮಾಡಬೇಕಾದ ಸಂಸ್ಕಾರಕ್ಕೆ 'ಶ್ರಾದ್ಧ' ಎನ್ನುತ್ತಾರೆ. ಶ್ರಾದ್ಧಕರ್ಮಗಳಲ್ಲಿನ ಮಂತ್ರೋಚ್ಚಾರಗಳಲ್ಲಿ ಪಿತೃಗಳಿಗೆ ಗತಿ ನೀಡುವ ಸೂಕ್ಷ್ಮಶಕ್ತಿ ಇದೆ. ಶ್ರಾದ್ಧಕರ್ಮಗಳಲ್ಲಿ ಪಿತೃಗಳಿಗೆ ಹವಿರ್ಭಾಗ ವನ್ನು ಕೊಡುವುದರಿಂದ ಅವರು ಸಂತುಷ್ಟರಾಗುತ್ತಾರೆ. ಶ್ರಾದ್ಧವನ್ನು ಮಾಡದಿದ್ದರೆ ಪಿತೃಗಳ ಆಸೆಗಳು ಅತೃಪ್ತವಾಗಿ ಉಳಿಯುತ್ತವೆ ಮತ್ತು ಈ ವಾಸನಾಯುಕ್ತ ಪಿತೃಗಳು ದುಷ್ಟಶಕ್ತಿಗಳ ಅಧೀನಕ್ಕೊಳಪಟ್ಟು ಅವರ ಗುಲಾಮರಾಗುತ್ತಾರೆ. ದುಷ್ಟಶಕ್ತಿಗಳು ವಾಸನಾಯುಕ್ತ ಪಿತೃಗಳ ಮೂಲಕ ಕುಟುಂಬದವರಿಗೆ ತೊಂದರೆಗಳನ್ನು ಕೊಡುವ ಸಂಭವವೂ ಇರುತ್ತದೆ. ಶ್ರಾದ್ಧವನ್ನು ಮಾಡುವುದರಿಂದ ಪಿತೃಗಳು ಆ ತೊಂದರೆಗಳಿಂದ ಮುಕ್ತರಾಗುವುದಲ್ಲದೇ ನಮ್ಮ ಜೀವನವೂ ಸುಖಮಯವಾಗುತ್ತದೆ.

ಶ್ರಾದ್ಧಕ್ಕೆ ಇಷ್ಟೊಂದು ಮಹತ್ವವಿದ್ದರೂ ಇಂದು ಹಿಂದೂಗಳಲ್ಲಿರುವ ಧರ್ಮಶಿಕ್ಷಣದ ಅಭಾವ, ಅಧ್ಯಾತ್ಮಶಾಸ್ತ್ರದ ಮೇಲಿನ ಅವಿಶ್ವಾಸ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆ ಇತ್ಯಾದಿಗಳಿಂದ ಶ್ರಾದ್ಧವಿಧಿಯು ಕಡೆಗಣಿಸಲ್ಪಟ್ಟಿದೆ. ಶ್ರಾದ್ಧಕರ್ಮವನ್ನು ಅವಾಸ್ತವ, ಅಯೋಗ್ಯ ಕರ್ಮಕಾಂಡವೆಂದು ಪರಿಗಣಿಸಲಾಗುತ್ತಿದೆ. ಆದುದರಿಂದ ಶ್ರಾದ್ಧ ಸಂಸ್ಕಾರವೂ ಇತರ ಸಂಸ್ಕಾರಗಳಷ್ಟೇ ಆವಶ್ಯಕವಾಗಿದೆ ಎಂಬುದನ್ನು ಹೇಳುವುದು ಆವಶ್ಯಕವಾಗಿದೆ.

ಶ್ರಾದ್ಧದ ಮಹತ್ವ, ಲಾಭಗಳು, ವಿಧಗಳು, ಶ್ರಾದ್ಧದಲ್ಲಿನ ವಿಧಿನಿಷೇಧದಂತಹ ಮೂಲಭೂತ ಮಾಹಿತಿಯನ್ನು 'ಶ್ರಾದ್ಧದ ಮಹತ್ವ ಮತ್ತು ಶಾಸ್ತ್ರೀಯ ವಿವೇಚನೆ' ಎಂಬ ಗ್ರಂಥದಲ್ಲಿ ಕೊಡಲಾಗಿದೆ. ಈ ಗ್ರಂಥದ ವೈಶಿಷ್ಟ್ಯವೇನೆಂದರೆ, ಶ್ರಾದ್ಧದಲ್ಲಿನ ವಿವಿಧ ಕೃತಿಗಳ ಹಿಂದಿನ ಬುದ್ಧಿಯ ಆಚೆಗಿನ ಅಧ್ಯಾತ್ಮಶಾಸ್ತ್ರವನ್ನು ತಿಳಿಸಿ ಹೇಳುವುದು. ಇದರಿಂದ ಶ್ರಾದ್ಧದ ಸತ್ಯತೆಯು ಮನದಟ್ಟಾಗುವುದಲ್ಲದೇ ಶ್ರಾದ್ಧದ ಬಗೆಗಿನ ವಿಕಲ್ಪಗಳು ದೂರವಾಗಲು ಸಹಾಯವಾಗುತ್ತದೆ. ಶ್ರಾದ್ಧವನ್ನು ಮಾಡುವಾಗ ೫ ಮಂದಿ ಬ್ರಾಹ್ಮಣರನ್ನು ಏಕೆ ಕರೆಯಬೇಕು ? ಅಕ್ಕಿಯ ಪಾಯಸವನ್ನು ಏಕೆ ಮಾಡಬೇಕು? ಶ್ರಾದ್ಧದಲ್ಲಿ ದರ್ಭೆ, ಕಪ್ಪುಎಳ್ಳು, ತುಳಸಿ ಮತ್ತು ಮೆಕ್ಕೆಜೋಳವನ್ನು ಏಕೆ ಉಪಯೋಗಿಸಬೇಕು ? ಶ್ರಾದ್ಧದಲ್ಲಿ ಕೆಂಪು ಹೂವುಗಳನ್ನು ಏಕೆ ಉಪಯೋಗಿಸಬಾರದು ? ಯಾವ ಶಾಸ್ತ್ರಾಧಾರದ ಮೇಲೆ ದೇವತೆಗಳಿಗೆ ಮತ್ತು ಪಿತೃಗಳಿಗೆ ನೈವೇದ್ಯವನ್ನು

ತೋರಿಸುತ್ತಾರೆ ? ಇಂತಹ ಪ್ರಶ್ನೆಗಳಿಗೆ ಈ ಗ್ರಂಥದಲ್ಲಿ ಉತ್ತರವನ್ನು ಕೊಡಲಾಗಿದೆ. ಅಲ್ಲದೇ ಶ್ರಾದ್ಧವನ್ನು ಮಾಡುವುದರಿಂದ ಪಿತೃಗಳಿಗೆ ಸದ್ಗತಿ ಸಿಕ್ಕಿದೆ ಎಂದು ಹೇಗೆ ಗುರುತಿಸುವುದು ? ಅವುಗಳ ಲಕ್ಷಣಗಳೇನು ? ಇತ್ಯಾದಿಗಳೊಂದಿಗೆ ಈ ಗ್ರಂಥದಲ್ಲಿ ಕೆಲವೊಂದು ಅನುಭೂತಿಗಳನ್ನೂ ಕೊಡಲಾಗಿದೆ.

ಈಶ್ವರನ ಕೃಪೆಯಿಂದ ಸನಾತನದ ಸಾಧಕರಿಗೆ ಪ್ರಾಪ್ತವಾದ ಈ ಜ್ಞಾನವು ಮುಂದಿನ ಹಂತದ್ದಾಗಿರುವುದರಿಂದ ಸಾಮಾನ್ಯ ಜನರಿಗೆ ತಿಳಿದುಕೊಳ್ಳಲು ಸ್ವಲ್ಪ ಕಷ್ಟ ವಾಗಬಹುದು. ಆದರೆ ಜಿಜ್ಞಾಸೆ ಮತ್ತು ತಳಮಳವಿದ್ದರೆ ಈ ಜ್ಞಾನವನ್ನು ತಿಳಿದು ಕೊಳ್ಳಲು ಖಂಡಿತವಾಗಿಯೂ ಸಾಧ್ಯವಾಗುತ್ತದೆ.

ಈ ಗ್ರಂಥದ ಅಧ್ಯಯನದಿಂದ ನಮ್ಮ ಋಷಿಮುನಿಗಳು ನಮಗೆ ನೀಡಿರುವ 'ಶ್ರಾದ್ಧ'ದ ಅಮೂಲ್ಯ ಸಂಸ್ಕೃತಿಯನ್ನು ಜೋಪಾಸನೆ ಮಾಡುವ ಸದ್ಬುದ್ಧಿಯು ನಮ್ಮೆಲ್ಲರಿಗೂ ಸಿಗಲಿ, ಹಾಗೆಯೇ ಶ್ರಾದ್ಧವಿಧಿಯನ್ನು ಶ್ರದ್ಧೆಯಿಂದ ಮಾಡುವಂತಾಗಿ, ನಮ್ಮ ಪೂರ್ವಜರ ಮತ್ತು ನಮ್ಮ ಉನ್ನತಿಯನ್ನು ಸಾಧಿಸುವಂತಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

ಟಿಪ್ಪಣಿ – 'ಧಾರ್ಮಿಕ ಕೃತಿಗಳ ಹಿಂದಿನ ಶಾಸ್ತ್ರವನ್ನು ಹೇಳುವ ಗ್ರಂಥ ಮಾಲಿಕೆ'ಯ ಸಮಾನ ಮನೋಗತವನ್ನು 'ಪೂಜಾಸಾಮಗ್ರಿಗಳ ಮಹತ್ವ' ಎಂಬ ಗ್ರಂಥದಲ್ಲಿ ನೀಡಲಾಗಿದೆ.

**ಟಿಪ್ಪಣಿ** ೧. ಗ್ರಂಥದಲ್ಲಿ ಬಹಳಷ್ಟು ಕಡೆಗಳಲ್ಲಿ 'ಪರಾತ್ಪರ ಗುರು ಡಾಕ್ಟರ' ಅಥವಾ 'ಪರಾತ್ಪರ ಗುರು ಡಾ. ಆಠವಲೆ' ಎಂಬ ಉಲ್ಲೇಖವಿದೆ, ಅದು ಗ್ರಂಥದ ಸಂಕಲನಕಾರರಾದ 'ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆ'ಯವರ ಬಗ್ಗೆ ಇದೆ.

೨. ಗ್ರಂಥದಲ್ಲಿ ಇತರ ಆಧಾರ ಗ್ರಂಥಗಳು, ಹಾಗೆಯೇ ಇತರ ಬರಹಗಳಿಂದ ಕೆಲವೊಂದು ಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಇಂತಹ ಅಂಶಗಳ ಕೊನೆಯಲ್ಲಿ ಸಣ್ಣ ಅಕ್ಷರಗಳಲ್ಲಿ ಕಂಸದಲ್ಲಿ ಆಧಾರಕ್ರಮಾಂಕಗಳನ್ನು ಹಾಕಲಾಗಿದೆ. ಅವುಗಳ ವಿವರಣೆಯನ್ನು ಗ್ರಂಥದ ಕೊನೆಯಲ್ಲಿನ 'ಆಧಾರಸೂಚಿಯಲ್ಲಿ' ನೀಡಲಾಗಿದೆ.

ವಾಚಕರಲ್ಲಿ ವಿನಂತಿ : 'ಸಂಸ್ಕೃತ'ವು ದೇವಭಾಷೆಯಾದುದರಿಂದ ಚೈತನ್ಯಮಯ ವಾಗಿದೆ. ಚೈತನ್ಯದ ಲಾಭವು ವಾಚಕರಿಗೆ ಸಿಗಬೇಕು ಎಂದು ಗ್ರಂಥಗಳಲ್ಲಿ ಸಂಸ್ಕೃತ ಶ್ಲೋಕ/ವಚನಗಳನ್ನು ಮುದ್ರಿಸಲಾಗುತ್ತದೆ. ಇದರಲ್ಲಿ ಏನಾದರೂ ತಪ್ಪುಗಳಿದ್ದರೆ ಅವುಗಳನ್ನು ವಾಚಕರು ನಮಗೆ ಅವಶ್ಯವಾಗಿ ತಿಳಿಸಬೇಕು.

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ಶ್ರಾದ್ಧಕರ್ಮದಲ್ಲಿನ ಕೆಲವು ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ ೧೭

* ಶ್ರಾದ್ಧಕರ್ತ ಮತ್ತು ಶ್ರಾದ್ಧಭೋಕ್ತಾ ಇವರಿಗೆ ಇರುವ ವಿಧಿನಿಷೇಧಗಳು ೧೭

* ಶ್ರಾದ್ಧದ ಭೋಜನವನ್ನು ಮಾಡುವವರು ಸ್ವಾಧ್ಯಾಯ, ಕಲಹ ಇತ್ಯಾದಿ ಕೃತಿಗಳನ್ನು ಏಕೆ ಮಾಡಬಾರದು? ೧೭

* ಶ್ರಾದ್ಧದಲ್ಲಿ ರಂಗೋಲಿಯ ಪುಡಿಯಿಂದ ರಂಗೋಲಿಯನ್ನು ಏಕೆ ಹಾಕಬಾರದು? ೧೯

* ಶ್ರಾದ್ಧಕರ್ಮಗಳಲ್ಲಿ 'ಓಂ'ನ ಉಚ್ಚಾರವನ್ನು ಏಕೆ ಮಾಡುವುದಿಲ್ಲ? ೨೦

* ಶ್ರಾದ್ಧದ ಸಂಕಲ್ಪವನ್ನು ಮಾಡುವ ಮೊದಲು ದ್ವಾರಲೋಪದ ವಿಚಾರವನ್ನು ಮಾಡುವುದು ಆವಶ್ಯಕವಾಗಿರುವುದು ೨೧

* ಶ್ರಾದ್ಧಕ್ಕಾಗಿ ತಂದೆ ಜೀವಂತವಾಗಿರುವಾಗ ಮಗನು ತಲೆಕೂದಲುಗಳನ್ನು ತೆಗೆಯುವುದು ಆವಶ್ಯಕವಾಗಿಲ್ಲ ೨೨

* ಸಾಮಾನ್ಯವಾಗಿ ಶ್ರಾದ್ಧಪ್ರಯೋಗವು ಹೇಗಿರುತ್ತದೆ? ೨೩

೨. ಶ್ರಾದ್ಧಕರ್ಮದಲ್ಲಿನ ಕೆಲವು ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ ೨೪

* ಶ್ರಾದ್ಧದಲ್ಲಿ ಜನಿವಾರವನ್ನು ಬಲಗಡೆಯ ಹೆಗಲಿನ ಮೇಲೆ (ಅಪಸವ್ಯ) ಏಕೆ ಹಾಕಿಕೊಳ್ಳಬೇಕು? ೨೭

* ದೇವರ ಪೂಜೆಯಲ್ಲಿನ ಕೃತಿಗಳನ್ನು ಗಡಿಯಾರದ ಮುಳ್ಳುಗಳು ತಿರುಗುವ ದಿಕ್ಕಿನಲ್ಲಿ ಮತ್ತು ಶ್ರಾದ್ಧದಲ್ಲಿನ ಅದೇ ಕೃತಿಗಳನ್ನು ವಿರುದ್ಧ ದಿಕ್ಕಿನಲ್ಲಿ ಏಕೆ ಮಾಡಬೇಕು? ೨೮

* ಶ್ರಾದ್ಧದ ಸಮಯದಲ್ಲಿ ಬ್ರಾಹ್ಮಣರನ್ನು ದೇವರಸ್ಥಾನದಲ್ಲಿ ಪೂರ್ವಾಭಿಮುಖವಾಗಿ ಮತ್ತು ಪಿತೃಸ್ಥಾನದಲ್ಲಿ ಉತ್ತರಾಭಿಮುಖವಾಗಿ ಏಕೆ ಕುಳ್ಳಿರಿಸಬೇಕು? ೨೯

* ಬ್ರಾಹ್ಮಣರಿಗೆ ಶ್ರಾದ್ಧದಲ್ಲಿ ಕೊಡುವ ದಾನದಲ್ಲಿ ಜನಿವಾರವು ಇಲ್ಲದಿದ್ದರೆ ಶ್ರಾದ್ಧವು ಏಕೆ ನಿಷ್ಫಲವಾಗುತ್ತದೆ ? ೩೨

* ಶ್ರಾದ್ಧಸಂಪಾತವಾದರೆ ಶ್ರಾದ್ಧವನ್ನು ಹೇಗೆ ಮಾಡಬೇಕು? ೫೪

* ಅವಿಧವಾ ನವಮಿಗೆ ಶ್ರಾದ್ಧವನ್ನು ಮಾಡುವ ಪದ್ಧತಿ ೫೪

* ಮಾತಾಮಹ ಶ್ರಾದ್ಧ (ಮಗನು ಮಾಡಬೇಕಾದ ತಾಯಿಯ ತಂದೆಯ ಶ್ರಾದ್ಧ) ೫೪

* ಯೋಗ್ಯರೀತಿಯಲ್ಲಿ ಅಂತ್ಯಸಂಸ್ಕಾರ ಆಗದಿರುವವರ ಶ್ರಾದ್ಧವನ್ನು ಮಾಡಬಹುದೇನು ? ೫೫

* ಸಂನ್ಯಾಸಿಯ ಶ್ರಾದ್ಧವನ್ನು ಹೇಗೆ ಮಾಡಬೇಕು? ೫೫

* ಯತಿಗಳ ಶ್ರಾದ್ಧವನ್ನು ಹೇಗೆ ಮಾಡಬೇಕು? ೫೬

* ಶ್ರಾದ್ಧವಿಧಿಯನ್ನು ಮನಃಪೂರ್ವಕವಾಗಿ ಮಾಡುವುದರ ಮಹತ್ವ ೫೬

**೩. ಶ್ರಾದ್ಧವನ್ನು ಮಾಡಿದ ನಂತರ ಪಿತೃಗಳಿಗೆ ಸದ್ಗತಿ ದೊರಕಿತು ಎಂದು ಗುರುತಿಸುವ ಲಕ್ಷಣಗಳು ಮತ್ತು ಅನುಭೂತಿ ೬೦**

**೪. ಶಾಸ್ತ್ರಕ್ಕನುಸಾರ ಶ್ರಾದ್ಧಕರ್ಮಗಳನ್ನು ಮಾಡದಿದ್ದರೆ ಆಗುವ ಹಾನಿಗಳು ೬೨**

**೫. ಶ್ರಾದ್ಧವನ್ನು ಮಾಡುವಾಗ ತೊಂದರೆಗಳು ಬಂದರೆ ಅವುಗಳನ್ನು ಹೇಗೆ ಪರಿಹಾರ ಮಾಡಬೇಕು? ೬೪**

**೬. ಶ್ರಾದ್ಧದ ಇತಿಮಿತಿ ೬೭**

**೭. ಸರ್ವಸಾಮಾನ್ಯ ವ್ಯಕ್ತಿಯ ಶ್ರಾದ್ಧ, ಶಕ್ತಿ ಉಪಾಸಕರ ಆರಾಧನಾ ವಿಧಿ, ಸಂತರ ಜನ್ಮೋತ್ಸವ ಮತ್ತು ಸಂತರ ಪುಣ್ಯತಿಥಿ ೬೮**

**೮. ಪೂರ್ವಜರಿಗೆ ಸದ್ಗತಿ ಸಿಗುವುದು ಮತ್ತು ಅತೃಪ್ತ ಪೂರ್ವಜರ ತೊಂದರೆಗಳಿಂದ ರಕ್ಷಣೆಯಾಗುವುದು ಇವುಗಳ ಸಂದರ್ಭದಲ್ಲಿ ಶ್ರಾದ್ಧವಿಧಿಗಳಂತೆ ದತ್ತನ ನಾಮಜಪದ ಮಹತ್ವ ೬೯**

* ಪೂರ್ವಜರು ಹೆಚ್ಚಿನ ಪ್ರಮಾಣದಲ್ಲಿ ಕೆಟ್ಟ ಶಕ್ತಿಗಳ ರೂಪದಲ್ಲಿ ಭೋಗವನ್ನು ಭೋಗಿಸುತ್ತಿದ್ದರೆ ಶ್ರಾದ್ಧದ ಊಟವನ್ನು ಮಾಡಿದ ನಂತರ ವಾಂತಿಬೇಧಿಯಂತಹ ತೊಂದರೆಗಳಾಗುತ್ತವೆ ಇದಕ್ಕೆ ಪರಿಹಾರವೆಂದು ದತ್ತನ ನಾಮಜಪ ಮಾಡಬೇಕು ೬೯

**卐 ಕೆಲವು ಸಾಂದರ್ಭಿಕ ಅಂಶಗಳು ೭೫**